ಅನಧಿಕೃತವಾಗಿ ಏನಾದರೂ ಅವರು ಕೆಲಸ ಪ್ರಾರಂಭ ಮಾಡಿದ್ದಾರೆಯೇ? ದಯವಿಟ್ಟು ಇದಕ್ಕೆ ಸಂಬಂಧಪಟ್ಟ ಮಂತ್ರಿಗಳು ಉತ್ತರಿಸಬೇಕು. ಸರ್ಕಾರ ಅನುಮತಿ ಅವರಿಗೆ ಕೊಟ್ಟಿದ್ದರೆ ಅದನ್ನು ತಕ್ಷಣ ರದ್ದುಪಡಿಸಬೇಕು. ಏಕೆಂದರೆ 'ಊರಿನ ಮಧ್ಯೆ ಡೈರಿ ಇರುವಂಥ ಜಾಗದಲ್ಲಿ, ಪೌಲ್ಟ್ರಿ ಫಾರ್ಮ್, ವ್ಯವಸಾಯ ಮಾಡತಕ್ಕಂಥ ಜಾಗದಲ್ಲಿ ಕೊಡಬಾರದು' ಎನ್ನುವ ಸರ್ಕಾರದ ಕಾನೂನು ಇದೆ. ಊರಿನ ಮಧ್ಯೆ ಜೆಲ್ಲಿ ತೆಗೆಯುವುದಕ್ಕೆ ಅನುಮತಿ ಕೊಡಬಾರದೆನ್ನುವುದಕ್ಕೆ ಕಾರಣ ಏನೆಂದರೆ- ಅದರ ಧೂಳು ಹೋಗಿ ಗಿಡಮರಗಳ ಮೇಲೆ ಕುಳಿತುಕೊಳ್ಳುವುದನ್ನು ನೋಡಿದ್ದೇವೆ. ತುಮಕೂರಿನಲ್ಲಿ ಸೀಮೆಂಟ್ ಫ್ಯಾಕ್ಟರಿಗೆ ಲೈಸೆನ್ಸ್ ಕೊಟ್ಟು ಅದು ಪ್ರಾರಂಭವಾಗಿ ಅದರ ಧೂಳು ತೆಂಗಿನ ಮರಗಳ ಮೇಲೆ ಕುಳಿತು ಇದರಿಂದ ಆ ತೆಂಗಿನ ಮನಗಳೆಲ್ಲಾ ಸತ್ತುಹೋಗುವಂಥ ಸಂದರ್ಭ ಬಂದಿತ್ತು. ನಂತರ ಧೂಳನ್ನು ತಡೆಯುವುದಕ್ಕೆ ಏನೋ ವ್ಯವಸ್ಥೆ ಮಾಡಿದ್ದಾರೆ. ಆದ್ದರಿಂದ ಜೆಲ್ಲಿ ತಯಾರು ಮಾಡುವುದಕ್ಕೆ ಲೈಸೆನ್ಸ್ ಏನಾದರೂ ಕೊಟ್ಟಿದ್ದರೆ ಅದನ್ನು ರದ್ದುಪಡಿಸಬೇಕು. ಅವರು ಇತ್ತೀಚೆಗೆ ಕೆಲಸ ಪ್ರಾರಂಭ ಮಾಡಿದ್ದಾರೆ. ಇನ್ನೂ ಇನ್‌ಸ್ಟಾಲ್ ಮಾಡಿಲ್ಲ. ಆ ಕಂಪನಿಯವರು ತುಂಬಾ ಖರ್ಚು ಮಾಡಿದ ಮೇಲೆ ಸರ್ಕಾರದ ಕಡೆಯಿಂದ ಕ್ರಮ ತೆಗೆದುಕೊಳ್ಳುವುದು ಕಷ್ಟ. ಅದಕ್ಕಾಗಿ ತಕ್ಷಣ ಕ್ರಮ ತೆಗೆದುಕೊಳ್ಳಬೇಕೆಂದು ತಮ್ಮ ಮೂಲಕ ಸರ್ಕಾರವನ್ನು ಒತ್ತಾಯ ಮಾಡುತ್ತೇನೆ.

ಶ್ರೀ ಎ.ಬಿ. ಪಾಟೀಲ್ (ಗಣಿ ಮತ್ತು ಭೂವಿಜ್ಞಾನ ಸಚಿವರು) :— ಮಾನ್ಯ ಉಪಾಧ್ಯಕ್ಷರೆ, ಶ್ರೀ ಬಿ. ಬಿ. ಶಿವಪ್ಪನವರು ಈ ವಿಷಯದ ಪ್ರಸ್ತಾವನೆ ಮಾಡಿದ್ದಾರೆ. ಇಷ್ಟರವರೆಗೆ ಸದರಿ ವಿಷಯ ಗೊತ್ತಿರಲಿಲ್ಲ. ಪರ್ಟಿಕ್ಯುಲರ್ ಆಗಿ ಯಾವ ಏರಿಯಾದಲ್ಲಿ ಜೆಲ್ಲಿ ತೆಗೆಯುವುದಕ್ಕೆ ಲೈಸೆನ್ಸ್ ಕೊಡಲಾಗಿದೆ ಮತ್ತು ಅದರಿಂದ ಏನೇನು ತೊಂದರೆ ಆಗುತ್ತದೆ ಎನ್ನುವ ಮಾಹಿತಿಗಳನ್ನು ತಾವು ಕೊಟ್ಟರೆ ತಕ್ಷಣ ಬಂದ್ ಮಾಡುವುದಕ್ಕೆ ಕ್ರಮ ತೆಗೆದುಕೊಳ್ಳುತ್ತೇವೆಂದು ತಮ್ಮ ಮುಖಾಂತರ ಮಾನ್ಯ ಸದಸ್ಯರಿಗೆ ಹೇಳಬಯಸುತ್ತೇನೆ.

ಶ್ರೀ ಬಿ. ಶಿವಪ್ಪ :— ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಸಚಿವರು ಕೇಳಿದ ಮಾಹಿತಿಯನ್ನು ಕಳುಹಿಸಿಕೊಡುತ್ತೇನೆ.

(ಬ) ಮಂಗಳೂರು ಬಂದರಿನ ಅಳವಿಯಲ್ಲಿ ಸರಕು ತುಂಬಿದ ಯಾಂತ್ರೀಕೃತ ನೌಕೆ ಮುಳುಗಿರುವುದು.

ಶ್ರೀ ಎನ್. ಯೋಗೀಶ್ ಭಟ್ (ಮಂಗಳೂರು ಕ್ಷೇತ್ರ) :— ಮಾನ್ಯ ಉಪಾಧ್ಯಕ್ಷರೆ, ಮಂಗಳೂರು ಬಂದರಿನ ಅಳವಿಯಲ್ಲಿ ಸರಕು ತುಂಬಿದ ಯಾಂತ್ರೀಕೃತ ಹಾಯಿನೌಕೆ ನಂ. ಇಎಲ್‌ಆರ್ 131, ಮುಳುಗಿ ಹಲವು ತಿಂಗಳು ಕಳೆಯಿತು. ವಿಶೇಷವಾಗಿ ಮಂಗಳೂರು ಬಂದರಿನಿಂದ ಮೀನುಗಾರಿಕಾ ಲಾಂಚ್‌ಗಳು ಮೀನುಗಾರಿಕೆಗೆ ಹೋಗುವಾಗ ಅನೇಕ ಅಪಘಾತಗಳು ಅಂದರೆ 8-9 ಅಪಘಾತಗಳು ಆಗಿವೆ. ಈ ಬಗ್ಗೆ ಪರ್ಸಿನ್ ಬೋಟ್ ಅಸೋಶಿಯೇಷನ್, ಟ್ರಾಲ್ ಬೋಟ್ ಅಸೋಸಿಯೇಷನ್ ಹೀಗೆ ಬೇರೆ ಬೇರೆ ಮೀನುಗಾರಿಕಾ

ಸಂಘಟನೆಗಳೂ ಕೂಡ ಮೀನುಗಾರಿಕೆ ಅಧಿಕಾರಿಗಳು ಮತ್ತು ಬಂದರು ಅಧಿಕಾರಿಗಳ ಗಮನಕ್ಕೆ ತಂದರೂ ಕೂಡ ಯಾವುದೇ ಕ್ರಮ ತೆಗೆದುಕೊಂಡಿಲ್ಲ. ಮುಂದೆ ಬರುವಂಥ ಮಳೆಗಾಲದಲ್ಲಿ ಇಂಥ ಅಪಘಾತಗಳು ಆಗುವ ಸಾಧ್ಯತೆ ಇದೆ. ಈ ಅಪಘಾತಗಳಿಂದ ಅನೇಕ ಸಾವುನೋವುಗಳು ಆಗುವಂಥ ಹಿನ್ನೆಲೆಯಲ್ಲಿ ತಕ್ಷಣ ಈ ಬೋಟ್‌ನ್ನು ತೆಗೆಯಬೇಕು ಎಂದು ತಮ್ಮ ಮೂಲಕ ಸರ್ಕಾರಕ್ಕೆ ಒತ್ತಾಯ ಮಾಡುತ್ತಿದ್ದೇನೆ. ಅಲ್ಲಿ ಏನು ಡ್ರೆಡ್ಜಿಂಗ್ ಇದೆ, ಹೂಳೆತ್ತುವಿಕೆ ಸರಿಯಾಗಿ ನಡೆಯುತ್ತಿಲ್ಲ. ಹೂಳೆತ್ತುವ ಕೆಲಸ ಕೂಡ ಸರಿಯಾಗಿ ನಡಯಬೇಕಾದರೆ ಹಳೆಯ ಡ್ರೆಡ್ಜಿಂಗ್ ಯಂತ್ರವನ್ನು ತೆಗೆದು ಅಲ್ಲಿಗೆ ಹೋಸ ಡ್ರೆಡ್ಜಿಂಗ್ ಯಂತ್ರವನ್ನು ತಂದು ಅದರ ಮೂಲಕ ಹೂಳು ಎತ್ತುವಿಕೆ ಕೆಲಸ ಆಗುವ ರೀತಿಯಲ್ಲಿ ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ತಮ್ಮ ಮೂಲಕ ಸರ್ಕಾರಕ್ಕೆ ಒತ್ತಾಯ ಮಾಡುತ್ತೇನೆ.

11.50 ಪಿ.ಎಂ.

ಶ್ರೀ ಕೆ. ಜಯಪ್ರಕಾಶ್ ಹೆಗಡೆ (ಬಂದರು ಮತ್ತು ಮೀನುಗಾರಿಕೆ ಸಚಿವರು) :— ಮಾನ್ಯ ಉಪಾಧ್ಯಕ್ಷರೆ, ಮಂಗಳೂರು ಹಳೆಯ ಬಂದರುನಲ್ಲಿ ಏನೊಂದು ಹಡಗು ಮುಳುಗಿದೆ ಅದು ಫಿಷಿಂಗ್ ಬೋಟ್ ಬರುವಂಥ ಚಾನಲ್‌ನಲ್ಲಿ ಅಲ್ಲ. ಪಕ್ಕದಲ್ಲಿ ಮುಳುಗಿದೆ. ಕೆಲವೊಮ್ಮೆ ಸರಿಯಾದ ದಾರಿ ತೋರದೆ ಸಣ್ಣಪ್ರಮಟ್ಟ ಅಪಘಾತ ಸಂಭವಿಸಿರತಕ್ಕಂಥದ್ದು ನಮ್ಮ ಗಮನಕ್ಕೆ ಬಂದಿದೆ. ಮುಳುಗಿರತಕ್ಕಂಥ ಹಡಗನ್ನು ಅದರ ಮಾಲೀಕರು ಎತ್ತುವುದಕ್ಕೆ ಯಾವ ಪ್ರಯತ್ನ ಮಾಡಿಲ್ಲ. ಸರ್ಕಾರದ ವತಿಯಿಂದ ಸಾಲ್ವೇಜ್ ಮಾಡುವುದಕ್ಕೆ ಈಗಾಗಲೇ ಟೆಂಡರ್‌ನ್ನು ಕರೆದಿದ್ದೇವೆ. ಅತಿ ಶೀಘ್ರದಲ್ಲಿ ಅದನ್ನು ತೆಗಿಸಿ ಅಲ್ಲಿ ಏನೂ ತೊಂದರೆಯಾಗದಂತೆ ಕ್ರಮ ಕೈಗೊಳ್ಳುತ್ತೇವೆ.

(ಜ) ಬಾಗೂರು ನವಿಲೆ ಸುರಂಗದ ವಿಚಾರ.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ (ಪಾಂಡವಪುರ) :— ಮಾನ್ಯ ಉಪಾಧ್ಯಕ್ಷರೆ, ಬಾಗೂರು ನವಿಲೆ ಸುರಂಗದ ವಿಷಯದ ಬಗ್ಗೆ ಎರಡು-ಮೂರು ಬಾರಿ ಮಾತುಕತೆ ನಡೆದಿದೆ. ಮಾನ್ಯ ನಂಜೇಗೌಡರ ನೇತೃತ್ವದಲ್ಲಿ ಮಾನ್ಯ ನೀರಾವರಿ ಮಂತ್ರಿಗಳು ಈ ವಿಷಯದ ಬಗ್ಗೆ ಸುಮಾರು ಚರ್ಚೆ ನಡೆದಿದೆ. ಅಂತಿಮ ತೀರ್ಮಾನವನ್ನು ಮಾನ್ಯ ಮುಖ್ಯಮಂತ್ರಿಗಳು ಇಲ್ಲದೇ ಇರುವುದರಿಂದ, ಈ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಒಂದು ಕಾಲವನ್ನು ನಿಗದಿ ಮಾಡುತ್ತೇವೆಂದು ಮೀಟಿಂಗ್‌ನಲ್ಲಿ ಹೇಳಿದಿರಿ. ಇಲ್ಲಿ ನಡೆದಿರತಕ್ಕಂಥ ಪೋಲಿಸ್‌ರ ದೌರ್ಜನ್ಯವನ್ನು ಕಂಡು ಮಾನವ ಹಕ್ಕುಗಳ ಆಯೋಗದವರು ಛೀಮಾರಿ ಹಾಕಿದ್ದಾರೆ. ನಾನು ಈ ಮಾತನ್ನು ಇಲ್ಲಿ ಏಕೆ ಹೇಳುತ್ತೇನೆಂದರೆ, ಮಾನ್ಯ ಮುಖ್ಯಮಂತ್ರಿಗಳೂ ಹಾಗೂ ಮಾನ್ಯ ನೀರಾವರಿ ಮಂತ್ರಿಗಳು ಇಲ್ಲಿ ಇರುವುದರಿಂದ ಒಂದು ಕಾಲವನ್ನು ನಿಗದಿ ಮಾಡಬೇಕು. ತಾವು ಈ ಸಮಸ್ಯೆಯ ಬಗ್ಗೆ ಸಾಕಷ್ಟು ಮಾತನಾಡಿ ಕೆಲವೊಂದು ವಿಷಯಗಳನ್ನು ತಾವು ಒಪ್ಪಿರುತ್ತೀರಿ ಜೊತೆಗೆ ಅಲ್ಲಿನ ಜನರೂ ಕೂಡ ಒಪ್ಪಿದ್ದಾರೆ. ತಾವು